ಸಂತ ಕ್ಲೇವಿಯರ್ ಕಾಲೇಜು ನಡೆಸಿದ ಸಮೀಕ್ಷೆ ಹೇಳುತ್ತದೆ. ಮುಂಬೈ, ಪುಣೆ, ದೆಹಲಿ, ಕೋಲ್ಕತ್ತ ಮತ್ತು ರಾಜಸ್ತಾನದ 16 ರಿಂದ 20 ವರ್ಷದ ಒಂದು ಸಾವಿರ ಯುವಕರಲ್ಲಿ ಈ ಸಮೀಕ್ಷೆಯನ್ನು ನಡೆಸಲಾಯಿತು. ಅದರಲ್ಲಿ ಶೇ. 47 ಜನರು ಸಿಗರೇಟು ಸೇವಿಸಿದರೆ ಶೇ. 20 ಯುವಕರು ಮಾದಕ ದ್ರವ್ಯ ಸೇವಿಸಿದ್ದಾರೆ. ಅದರಲ್ಲಿ ಶೇ. 83 ಯುವಕರಿಗೆ ಈ ಚಟದಿಂದ ಹೇಗೆ ಹೊರಬರಬೇಕೆಂದು ತಿಳಿದಿಲ್ಲ. ಇಂದಿನ ಯುವಕರು ಅನುಭವಿಸುತ್ತಿರುವ ಒಂದು ಜ್ವಲಂತ ಸಮಸ್ಯೆಯಾಗಿದೆ ಇದು. ಮಾತ್ರವಲ್ಲದೆ ಇದೊಂದು ಸಾಮಾಜಿಕ ಪಿಡುಗು ಕೂಡಾ. ಈ ಮಾದಕ ವಸ್ತುವಿನ ಜಾಲವು ರಾಜಾರೋಷವಾಗಿ ನಮ್ಮ ಮಧ್ಯೆ ವ್ಯಾಪಿಸಿದೆ. ಆರೋಗ್ಯಪೂರ್ಣ ಸಮಾಜವನ್ನು ಕಟ್ಟಿ ಬೆಳೆಸಲು ಒಂದು ಸಮಗ್ರವಾದ ಜಾಗೃತಿಯ ಅಗತ್ಯ ಇದೆ. ಈ ನಿಟ್ಟಿನಲ್ಲಿ ಸಮಾಜದಲ್ಲಿರುವ ಒಳಿತನ್ನು ಗುರುತಿಸುವುದರ ಜೊತೆಗೆ ಅದನ್ನು ಮುಕ್ತವಾಗಿ ಬೆಳೆಸುವ ಪೂರಕ ವಾತಾವರಣ ಸೃಷ್ಟಿಸಲು ಸಾಲಿಡಾರಿಟಿ ಯೂತ್ ಮೂವ್‌ಮೆಂಟ್ ಪ್ರಯತ್ನಿಸುವುದು.

ಸರ್ವತೋಮುಖ ಅಭಿವೃದ್ಧಿ

ಸದೃಢವಾದ ದೇಹದಲ್ಲಿ ಸಬಲ ಮನಸ್ಸಿರುತ್ತದೆ ಎಂಬ ಉಕ್ತಿಯಂತೆ ವ್ಯಕ್ತಿ ದೈಹಿಕವಾಗಿ ಆರೋಗ್ಯವಂತ ಹಾಗೂ ದೃಢಕಾಯನಾಗಿರಬೇಕು. ಯುವ ಜನತೆಗೆ ದೈಹಿಕ ಹಾಗೂ ಮಾನಸಿಕ ವಿಕಾಸಕ್ಕೆ ಅಗತ್ಯವಾದ ಎಲ್ಲಾ ತರಬೇತಿಯನ್ನು ಒದಗಿಸಬೇಕು. ದೈಹಿಕವಾಗಿಯೂ ಮಾನಸಿಕವಾಗಿಯೂ ಹಾಗೂ ಆಧ್ಯಾತ್ಮಿಕವಾಗಿಯೂ ಮುಕ್ತವಾಗಿ ಬೆಳೆಯುವ ವಾತಾವರಣ ಯುವಕರ ಮಧ್ಯೆ ಸೃಷ್ಟಿಯಾಗಬೇಕು. ಅದಕ್ಕಾಗಿ ಸಾಲಿಡಾರಿಟಿ ಯೂತ್ ಮೂವ್‌ಮೆಂಟ್ ಕಾರ್ಯಯೋಜನೆಗಳನ್ನು ಸಿದ್ಧಪಡಿಸಲು ಮುಂದಾಗಿದೆ.

ಪರಿಸರ ಸಂರಕ್ಷಣೆ – ನಮ್ಮ ಹೊಣೆ

ಪರಿಸರ ಸಂರಕ್ಷಣೆ ಹಾಗು ಸುಸ್ಥಿರ ಅಭಿವೃದ್ಧಿಯ ಮಾರ್ಗೋಪಾಯಕ್ಕಾಗಿ ಶ್ರಮಿಸುವುದು ಸಾಲಿಡಾರಿಟಿಯ ಧ್ಯೇಯೋದ್ದೇಶಗಳಲ್ಲೊಂದು. "ಇಮಾರತುಲ್ ಅರ್ದ್" ಅಂದರೆ ಭೂಮಿಯ ಪರಿಪಾಲನೆ ಧರ್ಮದ ಒಂದು ಭಾಗವೆಂದು ಇಸ್ಲಾಮ್ ಕಲಿಸಿಕೊಟ್ಟಿದೆ. ಪರಿಸರದ ಕುರಿತು ಕಾಳಜಿ ಹಾಗೂ ದೇವನ ಈ ಅನುಗ್ರಹಗಳನ್ನು ಮುಂದಿನ ತಲೆಮಾರಿಗೆ ಸುರಕ್ಷಿತವಾಗಿ ಕೊಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ಯುವಕರು ಮುಂದೆ ಬಂದು ಪರಿಸರದ ಮೇಲೆ ನಡೆಯುವ ದುಷ್ಟ ಹಸ್ತಕ್ಷೇಪವನ್ನು ತಡೆಯಬೇಕಾಗಿದೆ.

ಬನ್ನಿ, ಕ್ರಿಯಾತ್ಮಕ ಯೌವ್ವನದೊಂದಿಗೆ ಗುರುತಿಸಿಕೊಳ್ಳಿ.

ಸತ್ಯ, ನ್ಯಾಯ ಮತ್ತು ಹಕ್ಕುಗಳಿಗಾಗಿ ನಿರಂತರ ಹೋರಾಟ ಮಾಡುವ ಎಲ್ಲಾ ಯುವಕರು ಸಾಲಿಡಾರಿಟಿಯ ಸದಸ್ಯರು.

ಗುರಿ:

ಸಮಾಜದ ಶಾಂತಿ, ಪ್ರಗತಿ ಹಾಗೂ ಅಭ್ಯುದಯವನ್ನು ಸಾಧಿಸುವ ನಿಟ್ಟಿನಲ್ಲಿ ನೈತಿಕವಾಗಿ ಪ್ರಬುದ್ಧರಾದ ಯುವಕರನ್ನು ರಚನಾತ್ಮಕವಾಗಿ ಸಿದ್ಧಗೊಳಿಸುವುದು.

ಧ್ಯೇಯೋದ್ದೇಶಗಳು:

1. ಸಮಗ್ರ ಇಸ್ಲಾಮೀ ವ್ಯಕ್ತಿತ್ವವನ್ನು ರೂಪಿಸುವುದು.
2. ಸೃಷ್ಟಿಕರ್ತನಿಗೆ ವಿಧೇಯರಾಗಿ ಜನಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಯುವಕರನ್ನು ಪ್ರೇರೇಪಿಸುವುದು.
3. ಸಾಮಾಜಿಕ ನ್ಯಾಯ, ನಾಗರಿಕ ಹಕ್ಕು ಹಾಗೂ ಮಾನವ ಹಕ್ಕುಗಳನ್ನು ಸಂರಕ್ಷಿಸಲು ಪರಿಶ್ರಮಿಸುವುದು.
4. ಜ್ಞಾನ ಸಂಸ್ಕೃತಿಯನ್ನು ಯುವಕರಲ್ಲಿ ಬೆಳೆಸುವುದು.
5. ಬಹುತ್ವ, ಸೌಹಾರ್ದತೆ ಹಾಗೂ ಸಹಬಾಳ್ವೆಯ ಮೌಲ್ಯಗಳನ್ನು ಕಾಪಾಡುವುದು.
6. ನೈತಿಕ ಮೌಲ್ಯಗಳನ್ನು ಉತ್ತೇಜಿಸುವುದು ಹಾಗೂ ನ್ಯಾಯವನ್ನು ಸ್ಥಾಪಿಸುವ ನಿಟ್ಟಿನಲ್ಲಿ ಪ್ರಯತ್ನಿಸುವುದು.
7. ಕೌಶಲ್ಯಾಭಿವೃದ್ಧಿ, ಜೀವನೋಪಾಯದ ಅವಕಾಶಗಳು, ಉತ್ತಮ ಆರೋಗ್ಯಾಭ್ಯಾಸ ಹಾಗೂ ಉದ್ಯಮಶೀಲತೆಯ ರಂಗಗಳಲ್ಲಿ ಯುವಕರ ಸರ್ವತೋಮುಖ ಸಬಲೀಕರಣಕ್ಕಾಗಿ ಶ್ರಮಿಸುವುದು.
8. ಪರಿಸರ ಸಂರಕ್ಷಣೆ ಹಾಗೂ ಸುಸ್ಥಿರ ಅಭಿವೃದ್ಧಿಯ ಮಾರ್ಗೋಪಾಯಕ್ಕಾಗಿ ಶ್ರಮಿಸುವುದು.

ಸಾಲಿಡಾರಿಟಿ

ಯೂತ್ ಮೂವ್‌ಮೆಂಟ್ ಕರ್ನಾಟಕ

ಶಾಂತಿ ಸದನ, ನಂ. 52, 2ನೇ ಮುಖ್ಯ ರಸ್ತೆ, 1ನೇ ಬ್ಲಾಕ್
ಆರ್.ಟಿ. ನಗರ, ಬೆಂಗಳೂರು – 560032
ದೂರವಾಣಿ : 080 23534405, 25924059
e-mail : solidarityymkar@gmail.com
: symkarnataka

ಸಾಮಾಜಿಕ ನ್ಯಾಯ, ಸಮಾನತೆ ಹಾಗೂ ಮಾನವ ಹಕ್ಕುಗಳ ಹೋರಾಟದ ಹಾದಿಯಲ್ಲಿ...

ಇಂದು ನಾಗರಿಕ ಮತ್ತು ಮಾನವ ಹಕ್ಕುಗಳ ಪ್ರತ್ಯಕ್ಷ ಉಲ್ಲಂಘನೆ ನಡೆಯುತ್ತಿದೆ. ಅಭಿವೃದ್ಧಿಯ ಹೆಸರಿನಲ್ಲಿ ನೈಸರ್ಗಿಕ ಸಂಪನ್ಮೂಲಗಳ ಲೂಟಿ ಮಾಡಲಾಗುತ್ತಿದೆ. ಕೋಮುವಾದವು ಯುವ ಮನಸ್ಸುಗಳಲ್ಲಿ ವಿಷಬೀಜವನ್ನು ಬಿತ್ತಿ ಸಮಾಜದಲ್ಲಿ ಅರಾಜಕತೆಯನ್ನು ಸೃಷ್ಟಿಸುತ್ತಿದೆ. ಯುವಕರ ಪ್ರತಿಭೆಗಳನ್ನು ಕೇವಲ ಸ್ವಾರ್ಥಹಿತಕ್ಕಾಗಿ ಬಳಸುವ ರಾಜಕೀಯ ಪುಡಾರಿಗಳಿಗೆ ನಮ್ಮಲ್ಲಿ ಕೊರತೆ ಇಲ್ಲ. ಅನ್ಯಾಯ, ಅಸಮಾನತೆ, ಅಕ್ರಮ ಹಾಗೂ ಭ್ರಷ್ಟಾಚಾರ ತಾಂಡವ ವಾಡುವ ಇಂದಿನ ಪ್ರಸ್ತುತ ಸಮಾಜದಲ್ಲಿ ಕೇವಲ ವೀಕ್ಷಕರಾಗಲು ಯುವಕರಿಗೆ ಸಾಧ್ಯವಿಲ್ಲ. ಕ್ರಿಯಾತ್ಮಕ ಹಾಗೂ ಸೃಜನಾತ್ಮಕ ಯೌವ್ವನವು ಕಾಲದ ಬೇಡಿಕೆಯಾಗಿದೆ. ಇತಿಹಾಸದಲ್ಲಿ ಬದಲಾವಣೆಯ ಹರಿಕಾರರಾಗಿ ಕ್ರಿಯಾತ್ಮಕ ಹಾಗೂ ಸೃಜನಾತ್ಮಕ ಚಳುವಳಿಗೆ ನೇತೃತ್ವವನ್ನು ವಹಿಸಿದವರಾಗಿದ್ದಾರೆ ಯುವಕರು. ಅವರು ಸಮಾಜದ ನ್ಯಾಯ ಮತ್ತು ಸೌಹಾರ್ದತೆಯ ಕಾವಲುಗಾರರು. ಸಮಾಜದ ಬದಲಾವಣೆಯ ಚಾಲಕ ಶಕ್ತಿ ಅವರು. ಸಮಾಜವನ್ನು ಸತ್ಯ ಮತ್ತು ಅಹಿಂಸೆಯ ಆಧಾರದ ಮೇಲೆ ಕಟ್ಟಿ, ಹಸಿವು, ಬಡತನ, ಅಜ್ಞಾನ, ಅಸಮಾನತೆಯಿಂದ ಮುಕ್ತಗೊಳಿಸಿ ಮಾನವೀಯ ಮೌಲ್ಯಗಳಾದ ಸೋದರತ್ವ, ಸಮಾನತೆ ಹಾಗೂ ಸಹಬಾಳ್ವೆಯ ಆಶಯವನ್ನು ಪಸರಿಸಲು ಯುವಕರಿಗೆ ಸಾಧ್ಯವಾಗಬೇಕು. ಹೀಗೆ ಸಮಸ್ಯೆಗೆ ಪರಿಹಾರ ಕಂಡುಕೊಂಡು ಬದಲಾವಣೆಯ ಹೋರಾಟದಲ್ಲಿ ಸಂಪೂರ್ಣ ತೊಡಗಿಸಿಕೊಳ್ಳಲು ಸನ್ನದ್ಧರಾದ ಯುವಕರು ನಮ್ಮ ಆಶಾಕಿರಣ. ಈ ಎಲ್ಲಾ ಉದ್ದೇಶಗಳನ್ನು ಮುಂದಿಟ್ಟುಕೊಂಡು ಸಾಲಿಡಾರಿಟಿ ಯೂತ್ ಮೂವ್‌ಮೆಂಟ್ ಕರ್ನಾಟಕ ಮುನ್ನಡೆಯುತ್ತಿದೆ.

ಯುವಕರ ಸಬಲೀಕರಣ

ಭಾರತ ದೇಶದ ಶೇ. 70ರಷ್ಟು ಜನತೆ 40 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದು ಅತ್ಯುತ್ತಮ ಮಾನವ ಸಂಪನ್ಮೂಲ ಈ ದೇಶದಲ್ಲಿದೆ. ಯುವಕರಲ್ಲಿ ಗುರಿಯನ್ನು ಸಾಧಿಸುವ ಛಲವನ್ನು ಹುಟ್ಟುಹಾಕುವುದರ ಜತೆಗೆ ಅವರ ಸರ್ವತೋಮುಖ ವ್ಯಕ್ತಿತ್ವ ವಿಕಸನದ ಮಾರ್ಗೋಪಾಯ ಗಳನ್ನು ಸಿದ್ಧಪಡಿಸುವುದು ಅಷ್ಟೇ ಅಗತ್ಯ. ಆದರೆ ದುರಾದೃಷ್ಟವಶಾತ್, ಶಿಕ್ಷಣ ಹಾಗೂ ಇತರ ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ಸರ್ಕಾರವು ತನ್ನ ಜಿ.ಡಿ.ಪಿಯ ಕೇವಲ ಶೇಕಡಾ 3ರಿಂದ 4 ಮಾತ್ರ ವಿನಿಯೋಗಿಸುತ್ತಿದೆ. ಯುನಿಸೆಫ್‌ನ 2019ರ ವರದಿಯಲ್ಲಿ ಉದ್ಯೋಗಕ್ಕೆ ಅಗತ್ಯವಾದ ಶಿಕ್ಷಣ ಮತ್ತು ಕೌಶಲ್ಯ ಪಡೆಯುವಲ್ಲಿ ಶೇ.47ರಷ್ಟು ಯುವಕರು ಅರ್ಹರಾಗಿಲ್ಲ ಎಂದು ತಿಳಿಸಿತ್ತು. ನಮ್ಮ ದೇಶದ ಬಹುಪಾಲು ಯುವಕರು ಆರ್ಥಿಕವಾಗಿ ಸಾಕಷ್ಟು ಸುರಕ್ಷಿತವಾಗಿಲ್ಲವೆಂಬುದು ಒಂದು ವಾಸ್ತವ. ಆರ್ಥಿಕ ಕುಸಿತದ ಪರಿಸ್ಥಿತಿಯಲ್ಲಿ ಯುವಕರಲ್ಲಿ ನಿರೋದ್ಯೋಗಿಗಳ ಸಂಖ್ಯೆ ತೀವ್ರವಾಗಿ ಹೆಚ್ಚುತ್ತಿದೆ. ಈ ನಿಟ್ಟಿನಲ್ಲಿ ಕೌಶಲ್ಯಾಭಿವೃದ್ಧಿ, ಜೀವನೋಪಾಯದ ಅವಕಾಶಗಳು ಹಾಗೂ ಉದ್ಯಮಶೀಲತೆಯ ರಂಗಗಳಲ್ಲಿ ಯುವಕರ ಸರ್ವತೋಮುಖ ಸಬಲೀಕರಣಕ್ಕಾಗಿ ಸಾಲಿಡಾರಿಟಿ ಯೂತ್ ಮೂವ್‌ಮೆಂಟ್ ನಿರಂತರವಾಗಿ ಶ್ರಮಿಸುವುದು.

ಸೃಜನಶೀಲ ಯೌವ್ವನ:

ಭೌತಿಕವಾದ ಮತ್ತು ಸಂಪೂರ್ಣ ಲೌಕಿಕ ಪರಿತ್ಯಾಗ ಈ ಎರಡೂ ಅವಸ್ಥೆಗೆ ಯುವಕರು ಬಲಿಯಾಗಬಾರದು. ಅವರಲ್ಲಿ ಭರವಸೆಯ ಬೆಳಕು ಹಾಗೂ ಧನಾತ್ಮಕ ಚಿಂತನೆಗಳನ್ನು ಬಿತ್ತುವ ಕೆಲಸ ನಡೆಸಬೇಕಾಗಿದೆ. ದೈವಿಕ ಮಾರ್ಗದರ್ಶನದ ಬೆಳಕಿನಲ್ಲಿ ಸಮಾಜದ ಸಮಸ್ಯೆಗಳಿಗೆ ಸ್ಪಂದಿಸುವ ಹಾಗೂ ಸಾಮಾಜಿಕ ಕಳಕಳಿಯಿರುವ ಪ್ರಬುದ್ಧ ಯುವ ಸಮಾಜವನ್ನು ಕಟ್ಟಲು ಸಾಲಿಡಾರಿಟಿ ಪ್ರಯತ್ನಿಸುವುದು. ಅವರಲ್ಲಿ ಜ್ಞಾನದ ಸಂಸ್ಕೃತಿಯನ್ನು ಬೆಳೆಸುವುದರ ಜತೆಗೆ ಇಹ ಮತ್ತು ಪರಲೋಕದ ವಿಜಯಕ್ಕಾಗಿ ಕೆಲಸ ಮಾಡಲು ಪ್ರೇರೇಪಿಸುವುದು.

ವಿವಿಧತೆಯಲ್ಲಿ ಏಕತೆ:

ಭಾರತವು ಹಲವು ರಾಜ್ಯ, ಭಾಷೆ, ಧರ್ಮ ಹಾಗೂ ಸಂಸ್ಕೃತಿಗಳ ಬೀಡಾಗಿದೆ. ಏಕ ಸಂಸ್ಕೃತಿ ಈ ದೇಶಕ್ಕೂ ಹಾಗೂ ರಾಜ್ಯಕ್ಕೂ ಅನ್ಯವಾಗಿದೆ. ವಿವಿಧತೆಯಲ್ಲಿ ಏಕತೆ ಈ ದೇಶದ ವಿಶೇಷತೆಯಾಗಿದೆ. ಪ್ರತಿ ಹತ್ತು ಕಿ.ಮೀ. ಗೆ ವೈವಿಧ್ಯಮಯ ಸಂಸ್ಕೃತಿಯನ್ನು ನಮಗೆ ಕಾಣಬಹುದು. ಬಹು ಸಂಸ್ಕೃತಿ ಈ ದೇಶದ ಜೀವಾಳ. ಇಲ್ಲಿನ ಭಿನ್ನತೆಯನ್ನು ಎತ್ತಿ ಹಿಡಿದು ಅದರಲ್ಲಿ ಸೌಹಾರ್ದತೆಯ ಪಾಠಗಳನ್ನು ಹುಡುಕಿರುವುದು ನಮ್ಮ ಪರಂಪರೆಯಾಗಿದೆ. ಈ ನಾಡಿನ ಪರಂಪರೆಗೆ ಸ್ವಾರ್ಥಹಿತಾಸಕ್ತಿಗಳು ಈಗ ನಮ್ಮ ಜೀವನದ ಸಹಜ ಉಸಿರಾಗಿರುವ ಬಹುತ್ವದ ಮೇಲೆ ಅಕ್ರಮಣಕಾರಿಯಾಗಿ ದಾಳಿ ಮಾಡುತ್ತಿರುವುದು ಅಷ್ಟೇ ಸತ್ಯ. ಯುವಜನರಲ್ಲಿ ಅನ್ಯಧರ್ಮೀಯರ ಕುರಿತು ಪೂರ್ವಗ್ರಹಪೀಡಿತ ದ್ವೇಷದ ವಿಚಾರಗಳನ್ನು ಬಿತ್ತುವ ಕೆಲಸ ವ್ಯವಸ್ಥಿತವಾಗಿ ನಡೆಯುತ್ತಿದೆ. ಗತಕಾಲದ ಇತಿಹಾಸದ ವಿಕೃತೀಕರಣ ಮಾಡಿ ಹಸಿ ಸುಳ್ಳುಗಳನ್ನು ಸತ್ಯವೆಂದು ಬಿಂಬಿಸುತ್ತಿರುವ ಪ್ರಯತ್ನವೂ ಜತೆಯಾಗಿ ನಡೆಯುತ್ತಿದೆ. ಅಸಹಿಷ್ಣುತೆಯ ಕುರಿತು ಮಾತನಾಡುವುದೇ ಅಪರಾಧವಾಗಿದೆ. ಸರಕಾರವನ್ನು ಪ್ರಶ್ನಿಸುವುದನ್ನು ದೇಶದ್ರೋಹವೆಂದು ಮುದ್ರೆ ಹಾಕಲಾಗುತ್ತದೆ. ಈ ದೇಶದ ಬಹುತ್ವದ ಆಶಯವನ್ನು ಎತ್ತಿ ಹಿಡಿಯುವುದರ ಜತೆಗೆ ಎಲ್ಲಾ ಮನುಷ್ಯರ ಹಿತಕ್ಕಾಗಿ ದುಡಿಯುವ ಯುವ ಮನಸ್ಸುಗಳನ್ನು ಸಾಲಿಡಾರಿಟಿ ಸೃಷ್ಟಿಸಬಯಸಿದೆ. ಅದು ಸ್ವಾತಂತ್ರ್ಯ, ಸಮಾನತೆ, ಸಹೋದರತ್ವ ಮತ್ತು ಸಾಮಾಜಿಕ ನ್ಯಾಯ ಮುಂತಾದ ಮೌಲ್ಯಗಳ ಆಧಾರದಲ್ಲಿ ಯುವಕರನ್ನು ಸಜ್ಜುಗೊಳಿಸಬಯಸಿದೆ.

ಆರೋಗ್ಯಕರ ಸಮಾಜ:

ಮದ್ಯಪಾನ ಹಾಗೂ ಮಾದಕ ದ್ರವ್ಯದ ಪಿಡುಗು ಸಮಾಜದಲ್ಲಿ ಅತೀ ಹೆಚ್ಚಾಗಿ ವ್ಯಾಪಿಸುತ್ತಿದೆ. ಅದರಲ್ಲೂ ಯುವಕರು ಈ ಚಟಗಳಿಗೆ ಹೆಚ್ಚಾಗಿ ಬಲಿಯಾಗುತ್ತಿದ್ದಾರೆ. ಭಾರತದ ಶೇ.75 ಯುವಕರು 21ರ ಹರೆಯಕ್ಕೂ ಮೊದಲೇ ಮದ್ಯಪಾನ ಮಾಡುತ್ತಾರೆ ಎಂದು ಮುಂಬೈಯ